Office of the Principal Director
Karnataka State Audit & Accounts Department,
TTMC Building, 'A' Block,
3rd Floor, BMTC, Shanthinagara,
Bengaluru-560 027.
Phone No:- 080- 22215273
Fax No.:- 080- 22216500
E-mail: 1. controllerstateaccounts@yahoo.com
2. controllerksaad@gmail.com

ಪ್ರಧಾನ ನಿರ್ದೇಶಕರ ಕಚೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಟಿ.ಟಿ.ಎಂ.ಸಿ ಕಟ್ಟಡ, 'ಎ' ಬ್ಲಾಕ್,
3ನೇ ಮಹಡಿ, ಬಿ.ಎಂ.ಟಿ.ಸಿ, ಶಾಂತಿನಗರ,
ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22215273
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್:1. controllerstateaccounts@yahoo.com
2. controllerksaad@gmail.com

ಸಂಖ್ಯೆ:ರಾಲೆಪ 76 ಸಿಅಇ 2021 ದಿನಾಂಕ:29.12.2021

# ::ಸುತ್ತೋಲೆ::

ವಿಷಯ: ಈ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ದಿನಾಂಕ:22.03.2022ರೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಕುರಿತು

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಿಆಸುಇ 43 ಸೇವನೆ 2008 ದಿನಾಂಕ:07.03.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 53 ಸೇವನೆ 2021 ದಿನಾಂಕ:19.08.2021

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವಾ(ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012ರ ನಿಯಮ 1(3)ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳನ್ನು ಹೊರತುಪಡಿಸಿ ಇನ್ನಿತರ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕಡ್ಡಾಯಗೊಳಿಸಿದೆ. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀಣರಾಗಲು ಕಾಲಮಿತಿಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿದೆ. ಉಲ್ಲೇಖ(2)ರ ಸರ್ಕಾರದ ಸುತ್ತೋಲೆಯನ್ವಯ ಸರ್ಕಾರಿ ನೌಕರರು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ದಿನಾಂಕ:22.03.2022 ರೊಳಗೆ ತೆಗೆದುಕೊಂಡು ಖಡ್ಡಾಯವಾಗಿ ಉತ್ತೀರ್ಣರಾಗಬೇಕಾಗುತ್ತದೆ.

ಆದಕಾರಣ ಈ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಈವರೆಗೂ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದೇ ಇರುವವರು ದಿನಾಂಕ:22.03.2022 ರೊಳಗೆ ಪರೀಕ್ಷೆಯನ್ನು ತೆಗೆದುಕೊಂಡು ಉತ್ತೀರ್ಣರಾಗಬೇಕಾಗುತ್ತದೆ. ಇಲ್ಲದಿದಲ್ಲಿ ಸದರಿ ದಿನಾಂಕದ ನಂತರ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ನೌಕರರು ಪರಿವೀಕ್ಷಣಾ ಅವಧಿ, ಮುಂಬಡ್ತಿ ಹಾಗೂ ವಾರ್ಷಿಕ ವೇತನ ಬಡ್ತಿ ಇತ್ಯಾದಿ ಸೌಲಭ್ಯವನ್ನು ಪಡೆಯಲು ಅನರ್ಹರಾಗುತ್ತೀರ ಎಂದು ಈ ಮೂಲಕ ಸೂಚಿಸಲಾಗಿದೆ.

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು

ಪ್ರತಿಯನ್ನು:

1. ಅಪರ ನಿರ್ದೇಶಕರು, ಆಡಳಿತ/ಜಾಗೃತ ಕೋಶ, ಕೇಂದ್ರ ಕಚೇರಿ ಇವರಿಗೆ ಮಾಹಿತಿಗಾಗಿ.

..2

2. ಅಪರ ನಿರ್ದೇಶಕರು, ಪ್ರಾಂತೀಯ ಕಚೇರಿ, ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರಗಿ
3. ಜಂಟಿ/ಉಪ ನಿರ್ದೇಶಕರು, ಪ್ರಧಾನ ಕಚೇರಿ ಮತ್ತು ಎಲ್ಲಾ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ.
4. ಜಂಟಿ/ಉಪ ನಿರ್ದೇಶಕರು, ಆಡಳಿತ/ ಲೆಕ್ಕ ತನಿಖೆ/ ಕ್ರೋಢೀಕೃತ/ ಜಾಗೃತ ಕೋಶ, ಪ್ರಧಾನ ಕಚೇರಿ.
5. ಪ್ರಧಾನ ಕಚೇರಿಯ ಎಲ್ಲಾ ಲೆಕ್ಕಪರಿಶೋಧನಾಧಿಕಾರಿಗಳು ಮತ್ತು ಲೆಕ್ಕಾಧೀಕ್ಷಕರು ಪ್ರಧಾನ ಕಚೇರಿ.
6. ಪ್ರಧಾನ ಕಚೇರಿಯ ಎಲ್ಲಾ ವಿಷಯ ನಿರ್ವಾಹಕರರಿಗೆ, ಪ್ರಧಾನ ಕಚೇರಿ.
7. ಲೆಕ್ಕಪರಿಶೋಧನಾಧಿಕಾರಿ, ತರಬೇತಿ ಶಾಖೆ, ಪ್ರಧಾನ ಕಚೇರಿ. ಅಂತರ್ಜಾಲದಲ್ಲಿ ಪ್ರಕಟಣೆಗಾಗಿ.
8. ಈ ಕಚೇರಿಯ ಸೂಚನಾ ಫಲಕಕ್ಕೆ.
9. ಕಚೇರಿ ಪ್ರತಿ.